PCR 7/2024
PW.3

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸಾಕ್ಷಿಯ ಹೆಸರು : ಶ್ರೀ. ಸದಾಶಿವ ಶಿವನಗೌಡ ಪಾಟೀಲ
ಗಂಡನ ಹೆಸರು : ಶ್ರೀ. ಶಿವನಗೌಡ ಪಾಟೀಲ
ವಯಸ್ಸು : 30 ವರ್ಷ
ಉದ್ಯೋಗ : ಬಳ್ಳೊಳ್ಳಿ ಪೆಟ್ರೋಲ್ ಪಂಪ್ ನಲ್ಲಿ ಡಿ.ಎಸ್.ಎಮ್.
ವಾಸ್ತವ್ಯ : ಕೆ.ಕೆ.ಕೊಪ್ಪ, ತಾಃ ಬೆಳಗಾವಿ
ದಿನಾಂಕ : 19-03-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಕಲಂ 223 ಬಿ.ಎನ್.ಎಸ್.ಎಸ್. ಅಡಿ ಸ್ವಪ್ರಮಾಣೀಕೃತ ಹೇಳಿಕೆ**

ಈ ಪ್ರಕಣದ ಪಿರ್ಯಾದಿ ನಿತೀಶ ಕಿತ್ತೂರ ಪರಿಚಯ. ಆತನು ಬಳ್ಳೊಳ್ಳಿ ಪೆಟ್ರೋಲ್ ಪಂಪಿನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುತ್ತಾನೆ. ನಾನು ಸದರಿ ಪೆಟ್ರೋಲ್ ಪಂಪಿನಲ್ಲಿ ಡಿ.ಎಸ್.ಎಮ್. ಅಂತಾ ಕೆಲಸ ನಿರ್ವಹಿಸುತ್ತಿದ್ದೇನೆ. ಸದರಿ ಪೆಟ್ರೋಲ್ ಪಂಪಿನ ಮಾಲೀಕರು ಅಪ್ಪಾಸಾಬ ಬಳ್ಳೊಳ್ಳಿ ಆಗಿದ್ದು ಅದರ ಪಾಲುದಾರರಾಗಿ ಶೀತಲ್ ದೇವಕಿ ಹಾಗೂ ಪ್ರವೀಣ ಮುಕುಂದ ಕಂಗ್ರಾಳಕರ್ ಇರುತ್ತಾರೆ. ಪಿರ್ಯಾದಿದಾರನು ಪರಿಶಿಷ್ಟ ಜಾತಿಗೆ ಸೇರಿದವನಾಗಿರುತ್ತಾನೆ..

2. ದಿಃ 06.06.2024 ರಂದು ಬೆಳಿಗ್ಗೆ 6.00 ಘಂಟೆಯಿಂದ 2.00 ಗಂಟೆಗಯವರೆಗೆ ನನ್ನ ಕರ್ತವ್ಯದ ಅವಧಿ ಇತ್ತು. ಆದ ಕಾರಣ ಆ ದಿನ ನಾನು ಬೆಳಗ್ಗೆ 6.00 ಗಂಟೆ ಸುಮಾರಿಗೆ ಕೆಲಸ ಮಾಡಲು ಮೇಲೆ ಹೇಳಿದ ಪೆಟ್ರೋಲ್ ಪಂಪಿಗೆ ಹೋಗಿದ್ದು, ಆ ದಿನ ಪೆಟ್ರೋಲ್ ಹಾಕುವ ಕೆಲಸ ಮಾಡುವ ಸಿಬ್ಬಂದಿಯಾದಂತಹ ನಾನು, ಆಕಾಶ ಮುಗದ್ಯೆನವರ ಮತ್ತು

ಮಹಾಂತೇಶ ಮಾದಿಗರ ಬಂದಿದ್ದೇವು. ನಾವು ಆ ದಿನ ಪ್ರತಿ ದಿನದಂತೆ ಕೆಲಸ ಮಾಡುತ್ತಿದ್ದೇವು. ಆ ದಿನ ಸದರಿ ಪೆಟ್ರೋಲ್ ಪಂಪಿಗೆ ಪಾಲುದಾರಾದಂತಹ ಶೀತಲ್ ದೇವಕಿ ಮತ್ತು ಪ್ರವೀಣ ಕಂಗ್ರಾಳಕರ ಅವರು ಆ ದಿನ ಬೆಳಿಗ್ಗೆ 10.30 ಘಂಟೆಗೆ ಪೆಟ್ರೋಲ್ ಪಂಪ್ ಹತ್ತಿರ ಬಂದಿದ್ದು, ಸದರಿ ಪೆಟ್ರೋಲ್ ಪಂಪಿನ ಮ್ಯಾನೇಜರ್ ರವರ ಕೆಲಸ ಹಣಕಾಸಿನ ವ್ಯವಹಾರ ಅವರ ಜವಾಬ್ದಾರಿಯಾಗಿರುತ್ತದೆ. ಶೀತಲ್ ದೇವಕಿ ಮತ್ತು ಪ್ರವೀಣ ಕಂಗ್ರಾಳಕರ ನಿತೀಶ ಅವರ ಹತ್ತಿರ ಹಣ ಕೊಡಲು ಕೇಳಿದರು. ಆಗ ಅವರು ಹಣವನ್ನು ಕೊಡಲಿಲ್ಲ. ಹಣವನ್ನು ಬ್ಯಾಂಕಿಗೆ ಕಟ್ಟಬೇಕಾಗುತ್ತದೆ ಎಂದು ಹೇಳಿದರು.

3. ಆದರೂ ಕೂಡ ಅವರಿಗೆ ಒತ್ತಾಯ ಮಾಡಿದ್ದು ಆಗ ಮ್ಯಾನೇಜರ ಹಣವನ್ನು ಕಪಾಟಿನಲ್ಲಿ ಇಟ್ಟುದ್ದು ಅಲ್ಲಿಂದ ರೂ.20,000/- ಹಣವನ್ನು ಶೀತಲ್ ದೇವಕಿ ಮತ್ತು ಪ್ರವೀಣ ಕಂಗ್ರಾಳಕರ ರವರು ತೆಗೆದುಕೊಂಡರು. ಅದೇರೀತಿ ಆಕಾಶ ಕಡೆಯಿಂದ ಅವರಿಬ್ಬರೂ ರೂ. 10,000/- ಹಣವನ್ನು ಇಸಿದುಕೊಂಡಿರುತ್ತಾರೆ. ಸದರಿಯವರು ಹಣ ತೆಗೆದುಕೊಂಡು ಹೋಗುವಾಗ ನಿತೀಶ ರವರಿಗೆ ಬಯ್ಯುತ್ತ ತೆಗೆದುಕೊಂಡರು. ಶೀತಲ್ ದೇವಕಿ ಮತ್ತು ಪ್ರವೀಣ ಕಂಗ್ರಾಳಕರ ರವರು ಇಬ್ಬರೂ ಸೇರಿ ನಿತೀಶ ಇತನಿಗೆ ಹೊಲೇಯ ಸೂಳೆ ಮಗನ ನಿನಗ ಒಂದು ಕೈ ನೋಡ್ಕೋತಿನಿ ನಿನ್ನನ್ನು ಬಿಡುವುದಿಲ್ಲ ಅಂತಾ ಬೈದರು. ಸದರಿಯವರು ರೂ.30,000/- ಹಣ ತೆಗೆದುಕೊಂಡು ಹೋದ ಬಗ್ಗೆ ಆಫೀಸನಲ್ಲಿ ಇದ್ದಂತಹ ಬುಕ್ ದಲ್ಲಿ ಬರೆದು ಹೋದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಮ್ಮ ಕಚೇರಿಯಲ್ಲಿ ಕ್ಯಾಶ್ ಪುಸ್ತಕ ಇರುತ್ತದೆ ಎಂದರೆ ಸರಿ. ಸದರಿ ಕ್ಯಾಶ ಪುಸ್ತಕದಲ್ಲಿ ಹಣದ ವ್ಯವಹಾರದ ಬಗ್ಗೆ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಘಟನೆಯಾದ ನಂತರ ನಿತೀಶ ಇತನು ಬಾಗೇವಾಡಿ ಪೋಲಿಸ ಠಾಣೆಗೆ ಹೋಗಿ ದೂರು ನೀಡಲು ಹೋಗಿದ್ದರು. ಆದರೆ ಪೋಲೀಸರು ದೂರನ್ನು ತೆಗೆದುಕೊಂಡಿರುವುದಿಲ್ಲ. ಆದ ಕಾರಣ ನಿತೀಶ ಇತನು ನ್ಯಾಯಾಲಯದಲ್ಲಿ ಖಾಸಗಿ

ಪಿರ್ಯಾದಿ ಸಲ್ಲಿಸಿದ ಬಗ್ಗೆ ನನಗೆ ತಿಳಿದು ಬಂತು. ಘಟನೆಯು ನನ್ನ ಕಣ್ಣ ಮುಂದೆ ಆಗಿರುತ್ತದೆ. ಆದಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.